**Indian Streams Research Journal**
**Vol - I , ISSUE - III [April 2011 ]** **ISSN:-2230-7850**

# ಬಸವತತ್ವಜ್ಞಾನದಲ್ಲಿ ಇಷ್ಟಲಿಂಗದ ಪರಿಕಲ್ಪನೆ

*ಡಾ. ಗಂಗಾಂಬಿಕಾ ಪಾಟೀಲ*
*ಕನ್ನಡ ಸಹ -ಪ್ರಾಧ್ಯಾಪಕರು*
*ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯ ಬೀದರ*

ಪ್ರಾರಂಭದಲ್ಲಿ ಕೆಲವು ಮಾತುಗಳನ್ನು ಹೇಳಬೇಕೆನಿಸುತ್ತದೆ. ಏಕೆಂದರೆ ಇಷ್ಟಲಿಂಗದ ಪರಿಕಲ್ಪನೆ ತಿಳಿದುಕೊಳ್ಳಬೇಕಾದರೆ ಮನಸ್ಸಿನಲ್ಲಿ ಒಂದು ವಿಶಿಷ್ಟ ಭೂಮಿಕೆ ತಯ್ಯಾರಾಗಬೇಕಾಗುತ್ತದೆ. ಬೀಜ ಹಾಕಬೇಕಾದರೆ ಭೂಮಿ ಹೇಗೆ ತಯ್ಯಾರು ಮಾಡುತ್ತೇವಲ್ಲ ಹಾಗೆ. ಏಕೆಂದರೆ ಈ ಲಿಂಗತತ್ತ್ವ ಸಾಮಾನ್ಯವಲ್ಲ, ಇದು ಹಳೆಮಾನಸಿಕ ಭೂಮಿಕೆಯಿಂದ ಅರಿಯಲಿಕ್ಕೆ ಪ್ರಾರಂಭಮಾಡಿದರೆ ಅದು ಅಷ್ಟು ದೊರಕುವುದಿಲ್ಲವೆನಿಸುತ್ತದೆ. ಅದಕ್ಕೆ ಕೊಡದಲ್ಲಿನ ಹಳೆನೀರು ಚಲ್ಲಿ ಹೊಸ ನೀರು ತುಂಬಬೇಕಾಗುತ್ತದೆ. ಹಳೆ ನೀರಿನಲ್ಲಿ ಆಕ್ಸಿಜನ್ ಕಡಿಮೆಯಾಗಿರುತ್ತದೆ.

ನನಗೆ ಒಂದು ದೃಷ್ಟಾಂತ ನೆನಪಾಗುತ್ತಿದೆ. ಈ ದೃಷ್ಟಾಂತ ಹಳೆಮಾನಸಿಕ ಭೂಮಿಕೆಯಿಂದ ಹೊಸ ದೃಷ್ಟಿಯ ಕಡೆ ನೋಡಲು ಬಹಳ ಉಪಯೋಗ ವಾಗುತ್ತದೆನಿಸುತ್ತದೆ.

ಬಹುಶ್ಯ ನೀವೆಲ್ಲ ಕೇಳಿರಬಹುದು. ೧೭೮೯ರಿಂದ ೧೭೯೯ರ ಕಾಲಾವಧಿಯಲ್ಲಿ ಫ್ರೆಂಚ್ ರಾಷ್ಟ್ರದಲ್ಲಿ ಬಹುದೊಡ್ಡ ಕ್ರಾಂತಿಯಾಯಿತು. ಜಗತ್ತು ಇದಕ್ಕೆ ತಾಯಿ ಕ್ರಾಂತಿ ಎಂದು ಕರೆಯುತ್ತಾರೆ. ನನ್ನ ಅಭಿಪ್ರಾಯದಲ್ಲಿ ೧೨ನೇ ಶತಮಾನದಲ್ಲಿ ಕಲ್ಯಾಣ ರಾಜ್ಯದಲ್ಲಾದ ಶರಣರ ಕ್ರಾಂತಿಯೇ ಜಗತ್ತಿನ ತಾಯಿ ಕ್ರಾಂತಿವೆನಿಸುತ್ತದೆ. ಆ ವಿಷಯದಲ್ಲಿ ಇಂದು ನಾವು ಹೋಗುವುದಿಲ್ಲ. ಫ್ರಾನ್ಸ್ ಕ್ರಾಂತಿಯ ಕೊನೆಗೆ ಅಲ್ಲಿಯ ರಾಜಾ ಲುಯಿಸ ೧೬ನಿಗೆ ೨೧. ೦೧. ೧೭೯೩ಕ್ಕೆ ಮತ್ತು ರಾಣಿ ಮ್ಯಾರಿ ಅಂಟೊನಿಟಗೆ ಎರಡು ದಿವಸದ ನಂತರ ಗಿಲೊಟಿನದಿಂದ ಮೃತ್ಯುದಂಡ ಕೊಡಲಾಯಿತು.

ಇದಾನಂತರ ಕ್ರಾಂತಿಕಾರಿಗಳು ರಾಜನ ಅರಮನೆ, ದೇಶದ ಆಡಳಿತ ತಮ್ಮ ಕೈಯಲ್ಲಿ ತೆಗೆದುಕೊಂಡರು. ದೇಶದ ದೊಡ್ಡ ಕಾರಾಗೃಹವಾದ ಬ್ಯಾಸ್ಟಿಲ್ ಕೋಟೆ (ಃಣಡಿಟಿಜಣ) ವಶಪಡಿಸಿಕೊಂಡು ಅದರಲ್ಲಿದ್ದ ಎಲ್ಲ ಕೈದಿಗಳ ಬೇಡಿ ಕಡಿದು, ಅವರ ಮೈ ಮತ್ತು ಕಾಲು, ಕೈಗಳಿಗೆ ಹಾಕಿದ ಸರಪಳಿ ಕಳೆದು, ಅವರಿಗೆ ಕೈದಿನಿಂದ ಮುಕ್ತ ಮಾಡಿ ತಮ್ಮ ತಮ್ಮ ಮನೆಗೆ ಹೋಗಲು ತಿಳಿಸಿದರು. ಕೈದಿಗಳಿಗೆ ಎಲ್ಲಿಲ್ಲದ ಆನಂದ. ತಮ್ಮ ಮನೆಗೆ ಹೋಗುವ ಸಂತೋಷದಲ್ಲಿ ಜೈಲಿನಿಂದ ತಂಡೋಪತಂಡದಲ್ಲಿ ಹೊರಗೆ ಓಡಿಬಂದರು. ಅವರನ್ನು ಮುಕ್ತ ಮಾಡಿದ ಕ್ರಾಂತಿಕಾರಿ ಗಾರ್ಡ್‌ಗಳಿಗೂ ಆನಂದವಾಯಿತು.

ಆದರೆ ಆಶ್ಚರ್ಯದ ಸಂಗತಿ ಎಂದರೆ ಸಂಜೆಯವರೆಗೆ ಜೈಲಿನಿಂದ ಬಿಡುಗಡೆಯಾದ ಸುಮಾರು ೭೦% ಕೈದಿಗಳು ಮರಳಿ ಬಂದರು. ಗಾರ್ಡ್‌ಗಳು ನೀವು ಮತ್ತೇಕೆ ಮರಳಿ ಜೈಲಿಗೆ ಬಂದಿದ್ದೀರಿ ಎಂದು ಕೇಳಿದರೆ ಅವರು ಹೇಳಿದರು. "ಏನು ಮಾಡಬೇಕು ನಮ್ಮಲ್ಲಿಯ ಅನೇಕರು ೩೦-೩೫ ವರುಷ ಜೈಲಿನ ಕಾಳ ಕತ್ತಲ ಕೊಠಡಿಯಲ್ಲಿ ಕಾಲ ಕಳೆದಿದ್ದೇವೆ. ಅನಪೇಕ್ಷಿತವಾಗಿ ಒಮ್ಮಿಂದೊಮ್ಮಲೇ ಹೊರಗೆ ಹೋದೆವು. ಆದರೆ ನಮ್ಮ ಕಣ್ಣುಗಳಿಗೆ ಹೊರಗಿನ ಸೂರ್ಯನ ಬೆಳಕು ಸಹನವಾಗುತ್ತಿಲ್ಲ. ಅದಕ್ಕಾಗಿ ಮರಳಿ ಇಲ್ಲಿಗೆ ಬಂದಿದ್ದೇವೆ. ಕೆಲವು ದಿವಸ ಪ್ರಕಾಶಕ್ಕೆ ಹೊಂದಿಕೊಂಡ ನಂತರ ಹೊರಗೆ ಹೋಗುತ್ತೇವೆ" ಗಾರ್ಡ್‌ಗಳಿಗೆ ಅವರ ಮಾತು ತಿಳಿಯಿತು. ಕೈದಿಗಳಿಗೆ ಮತ್ತೆ ಜೈಲಿಗೆ ಸೇರಿಸಿಕೊಂಡರು.

ಈ ಘಟನೆಗಿಂತಲು ಇನ್ನೊಂದು ದುಃಖದಾಯಕ ಸಂಗತಿ ಅಂದಿನ ರಾತ್ರಿ ಪಾಳಿಯ ಗಾರ್ಡ್‌ಗಳಿಗಾಗಿ ಕಾದಿತ್ತು. ಗಾರ್ಡ್‌ಗಳು ರಾತ್ರಿ ೧೦-೧೧ ಗಂಟೆಯ ತಮ್ಮ ನಿಯಮಿತ ಜೈಲು ವಾರ್ಡ್‌ಗಳ ಸುತ್ತುಹಾಕುತ್ತಿದ್ದಾಗ ಅವರಿಗೆ ಆಶ್ಚರ್ಯದಾಯಕ ದೃಶ್ಯ ಕಣ್ಣಿಗೆ ಬಿದ್ದಿತು. ಮರಳಿ ಬಂದ ಕೈದಿಗಳು ತಮ್ಮ ಕೈ ಕಾಲಿಗೆ ಮತ್ತು ಮೈಮೇಲೆ ಕಡಿದು ಹಾಕಿದ ಸಂಕಳಿಯನ್ನು ಹೊದ್ದು ಮಲಗಿದ್ದರು.

ಒಬ್ಬ ಗಾರ್ಡ್ ತನ್ನ ಕುತೂಹಲ ತಡೆಯಲಾಗದೆ ಸಂಕಳಿಯನ್ನು ಹೊದ್ದು ಮಲಗಿದ್ದ ಕೆಲವು ಕೈದಿಗಳನ್ನು ಎಬ್ಬಿಸಿಕೇಳಿದ "ಕ್ರಾಂತಿಕಾರಿಗಳು ನಿಮ್ಮ ಕಷ್ಟ ಕಂಡು ದುಃಖಿತರಾಗಿ ಮೊದಲು ನಿಮಗೆ ಜೈಲಿನಿಂದ ಮುಕ್ತ ಮಾಡಿದರು. ನೀವು ಆನಂದದಿಂದ ಮನೆಗೆ ಹೋಗಿ ನಿಮ್ಮ ಕುಟುಂಬದವರ ಜೊತೆ ಸ್ವಚ್ಛಂದ ವಾತಾವರಣದಲ್ಲಿ ಉಳಿಯುವ ಬದಲಾಗಿ ಮತ್ತೆ ಜೈಲಿಗೆ ಬಂದಿದ್ದೀರಿ. ಬಂದು ಇಲ್ಲಿಯಾದರೂ ಮುಕ್ತವಾಗಿ ಮಲಗದೆ ಮತ್ತೆ ಅವೆ ಸಂಕಳಿ ಹೊದ್ದು ಕೈದಿಗಳಂತೆ ಮಲಗಿದ್ದೀರಿ ಇದರ ಕಾರಣ ನಮಗೆ ತಿಳಿದಿಲ್ಲ" ಎಂದಾಗ ಒಬ್ಬ ಮುಕ್ತವಾದ ಕೈದಿ ಮುಂದೆ ಬಂದು ಹೇಳಿದ "ಕಳೆದ ೨೫-೩೦ ವರುರ್ಷಗಳಿಂದ ಒಂದು ದಿವಸ ಕೂಡ ನಾವು ಮುಕ್ತ ಜೀವನ ಬಾಳಿಲ್ಲ. ಈ ಭಾರ ಹೊದೆಯದೆ ಮಲಗಿಲ್ಲ. ಈಗ ಅವು ನಮ್ಮ ಜೀವನದ ಅಂಗವಾಗಿವೆ. ಮುಕ್ತ ಜೀವನದಿಂದ ಭಯವಾಗುತ್ತದೆ. ಮೈಮೇಲೆ ಭಾರವಿಲ್ಲದೆ ಹಗುರಾಗಿ ಮಲಗಿದರೆ ನಿದ್ರೆ ಬರಲಿಲ್ಲ. ಅದಕ್ಕಾಗಿ ಈ ಸಂಕಳಿ ಹೊದ್ದು ಮಲಗಿದ್ದೇವೆ. ನಮಗೆ ಇನ್ನೂ ಕೈದಿನಲ್ಲೆ ಇರುವ ರೂಢಿ ಇದೆ. ಸ್ವಾತಂತ್ರ್ಯದ ಸಿಹಿ ನಾವು ಅನುಭವಿಸಬೇಕು. ಆವಾಗ ಸಂಕಳಿಗಳ ಭಾರ ಇಲ್ಲದೆ ನಿದ್ರೆ ಬರುತ್ತದೆ" ಎಂದ.

ಹಾಗೆ ಲಿಂಗವಂತರ ಟುಟಿಜ ಕೂಡ ವೈದಿಕದ ಉಪನಿವೇಶಿಕೆಯಲ್ಲಿ ಸಿಲುಕಿಕೊಂಡಿದೆ. ಅದಕ್ಕೆ ಇಷ್ಟಲಿಂಗ ದರ್ಶನ ಸ್ಪಷ್ಟವಾಗುತ್ತಿಲ್ಲ. ಆ ದರ್ಶನ ಪಡೆದುಕೊಳ್ಳಬೇಕಾದರೆ ಹಳೆ ವಿಚಾರ ತೆಗೆದಾಗ ಮಾತ್ರ ಸಾಧ್ಯವಾಗುತ್ತದೆ.

ಇಷ್ಟಲಿಂಗದ ವಿಷಯದಲ್ಲಿ ಹೇಳುವುದೇನೆಂದರೆ ಭಾರತೀಯರ ಜ್ಞಾನ ಪರಂಪರೆಗೆ ಸುದೀರ್ಘವಾದ ಇತಿಹಾಸವಿದೆ. ಭಾರತ ದೇಶ ಜಗತ್ತಿನಲ್ಲಿ ಯಾವುದಾದರೂ ಒಂದು ವಿಷಯಕ್ಕೆ ಹೆಸರಾಂತವಾಗಿದ್ದರೆ ಅದು ಅದರ ಜ್ಞಾನ ಪರಂಪರೆಯಾಗಿದೆ. ಭಾರತಕ್ಕೆ ಜ್ಞಾನದ ವಿಶ್ವಗುರು ಎಂದು ಭಾವಿಸಲಾಗಿದೆ. ಭಾರತೀಯರ ಜ್ಞಾನ ಪರಂಪರೆಯನ್ನು ೪ ಪ್ರವಾಹಗಳಲ್ಲಿ ವಿಭಾಗಿಸಬಹುದು.

೧. ಒಂದನೆಯದು ಶಾಸ್ತ್ರೀಯ ಪರಂಪರೆ ಅಥವಾ ಜ್ಞಾನ ಪರಂಪರೆ
೨. ಎರಡನೆಯದು ಭಕ್ತಿ ಪರಂಪರೆ
೩. ಮೂರನೆಯದು ಸಾಧನಾ ಪರಂಪರೆ
೪. ನಾಲ್ಕನೆಯದು ಲೋಕ ಪರಂಪರೆ

ಇವು ನಾಲ್ಕು ಜ್ಞಾನ ಪ್ರವಾಹ ಪರಂಪರೆಗಳು ಇಷ್ಟು ವಿಶಾಲವಾಗಿವೆ ಎಂದರೆ ಅವು ನಾಲ್ಕನ್ನು ಏಕತ್ರಿತಗೊಳಿಸಿದರೆ ಜ್ಞಾನದ ಮಹಾಮೇರುವೆ ತಯ್ಯಾರಾಗುತ್ತದೆ ಅಥವಾ ಹಿಮಾಲಯಕ್ಕಿಂತಲೂ ಎತ್ತರವಾದ ಪರ್ವತ ತಯ್ಯಾರಾಗುತ್ತದೆ. ಈ ಜ್ಞಾನ ಪರ್ವತದ ಏಕೈಕ ದರ್ಶನವೆಂದರೆ ಅದು ಇಷ್ಟಲಿಂಗ ದರ್ಶನವಿದೆ ಎಂದು ಹೇಳಬಹುದು. ನಮ್ಮ ಶರಣ ಸಂಪ್ರದಾಯ ಬಹಳ ಅದ್ಭುತವಾದಂಥ ಸಂಪ್ರದಾಯವಿದೆ. ಇದು ಜಗತ್ತಿನ ಭೂಪಟಲದ ಮೇಲೆ ಇನ್ನೊಂದು ಕಡೆ ಸಿಗುವುದಿಲ್ಲ, ಬಹಳ ಕಠಿಣವಿದೆ. ಸಿಗಲಿಕ್ಕೆ ಸಾಧ್ಯವಿಲ್ಲವೇನೋ ಎನಿಸುತ್ತದೆ.

ಶರಣರೆಂದರೆ ಸಾಮಾನ್ಯರಲ್ಲ, ಜಗತ್ತಿನ ಎಲ್ಲಾ ಋಷಿ ಮುನಿಗಳು ದಾರ್ಶನಿಕರು ಅನಂತ ಕೋಟಿ ಸಾಧಕರು ಎಲ್ಲರಲ್ಲಿ ಮೇಲ್ಪಂಕ್ತಿಯಲ್ಲಿದ್ದವರು. ಆ ಶರಣರು ಜೀವನೋನ್ನತಿಯ ಒಂದು ತಂತ್ರ ಕಂಡು ಹಿಡಿದಿದ್ದರು. ಆ ತಂತ್ರ ಏನಿದೆ ಅಂದರೆ ಇಷ್ಟಲಿಂಗ ಯೋಗ.

ಅಲ್ಲಮಪ್ರಭುವಿಗೆ ವ್ಯೋಮಕಾಯಯೋಗಿ ಅಥವಾ ಆಕಾಶ ಕಾಯ ಎನ್ನುತ್ತಾರೆ. ಅವರ ಮೈಗೆ ಖಡ್ಗ ಹೊಡೆದರೆ ಗಾಳಿಯಲ್ಲಿ ತಿರುಗಿಸಿದಂತೆ ಆ ಕಡೆಯಿಂದ ಈ ಕಡೆಗೆ ಬರುತ್ತಿತ್ತಂತೆ. ಅಂಥ ಶರೀರ. ಅವರ ತಪೋಭೂಮಿಗೆ ಗೂಗಲ್ ಅಂತಾರೆ. ಈ ಹೆಸರುಯಾಕೆ ತೆಗೆದುಕೊಳ್ಳುತ್ತಾ ಇದ್ದೀನಿ ಅಂದರೆ ಆಧುನಿಕ ಯುಗದಲ್ಲಿ ಜಗತ್ತಿನ ಗುರು ಯಾವುದೆಂದರೆ ಗೂಗಲ್ ಇದೆ. ಗೂಗಲ್ ಸಂಶೋಧಕನಿಗೆ ಈ ಹೆಸರು ಯಾಕೆ ಇಡಬೇಕು ಅನಸ್ತೋ ಗೊತ್ತಿಲ್ಲ. ಆದರೆ ನನ್ನ ಭಾವನೆ ಹೀಗಿದೆ. ಅಲ್ಲಮಪ್ರಭುಗಳು ಏಕಕಾಲಕ್ಕೆ ಎಲ್ಲಾ ಕಡೆ ಪ್ರಕಟ ಆಗುವ ಶಕ್ತಿ ಹೊಂದಿದ್ದರಂತೆ, ಇಂಟರ್‌ನೆಟ್‌ಗು ಈ ಶಕ್ತಿ ಇದೆ. ಅದಕ್ಕಾಗಿಯೇ ಇಂಟರ್ ನೆಟ್‌ದ ಸರ್ಚ್ ಎಂಜಿನ್‌ಗೆ ಗೂಗಲ್ ಎಂದು ಕರೆದಿರಬಹುದು. ಇಂಥ ಶ್ರೇಷ್ಠ ಯೋಗಿ ಅಲ್ಲಮಪ್ರಭು ಹೇಳುತ್ತಾರೆ.

**"ಲಿಂಗವನರಿಯದೆ ಏನನರಿದಡೆಯೂ ಫಲವಿಲ್ಲ**
**ಲಿಂಗವನರಿದ ಬಳಿಕ ಮತ್ತೇನನರಿದಡೆಯೂ ಫಲವಿಲ್ಲ**
**ಸರ್ವಕಾರಣ ಲಿಂಗವಾಗಿ ಲಿಂಗವನೇ**
**ಅರಿದರಿದು ಲಿಂಗಸಂಗವನೇ**
**ಮಾಡುವೇ ಸಂಗಸುಖದೊಳು**
**ಓಲಾಡುವೆ ಗುಹೇಶ್ವರಾ"**

ಹಾಗಾದರೆ ಲಿಂಗವೆಂದರೇನು? ಎಂಬ ಪ್ರಶ್ನೆ ಬರುತ್ತದೆ. ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವಣ್ಣನವರು ಹೇಳುತ್ತಾರೆ.

**'ಲಿ' ಕಾರವೇ ಶೂನ್ಯ ಬಿಂದುವೆ 'ಂ' ಲೀಲೆ .**
**'ಗ' ಕಾರವೇ ಚಿತ್ತು ಈ ತ್ರಿವಿಧದೊಳಗಿದೆ**
**ಲಿಂಗವೆಂಬ ಸಕೀಲ ಇದರ ಸಂಚವನಾವಾತ**
**ಬಲ್ಲ ಆತನೆ ಲಿಂಗಸಂಗಿ ಇದುಕಾರಣ.**
**ಲಿಂಗಾನುಭವಿಗಳ ಶ್ರೀ ಚರಣಕ್ಕೆ ನಮೋನಮೋ**
**ಎಂಬೆ ಕೂಡಲ ಚೆನ್ನಸಂಗಮದೇವಾ.**

ಎರಡನೆಯ ಪ್ರಶ್ನೆ ಕಾಡುತ್ತದೆ, ಆ ಲಿಂಗ ಎಲ್ಲಿದೆ? ಕಾಶಿಯಲ್ಲಿ ಇದೇನಾ, ಕೇದಾರ ಬದ್ರಿಯಲ್ಲಿ ಇದೇನಾ, ರಾಮೇಶ್ವರದಲ್ಲಿ ಇದೇನಾ? ಅಂಬಿಗರ ಚೌಡಯ್ಯನವರು ಹೇಳುತ್ತಾರೆ.

**"ಅಡವಿಯೊಳಗರಸುವಡೆ ಸಿಡಿಗಂಟಿತಾನಲ್ಲ**
**ಮಡುವಿನೊಳಗರಸುವಡೆ ಮತ್ಸ ಮಂಡೂಕನಲ್ಲ**
**ತಪಂಬಡುವಡೆ ವೇಷಕ್ಕೆ ವೇಳೆಯಲ್ಲ**
**ಒಡಲ ದಂಡಿಸುವಡೆ ಕೊಡುವ ಸಾಲಿಗನಲ್ಲ**
**ಅಷ್ಟತನುವಿನೊಳಗೆ ಹುದುಗಿರ್ದ ಲಿಂಗವ**
**ನಿಲುಕಿ ನೋಡಿಯೆ ಕಂಡನಂಬಿಗ ಚೌಡಯ್ಯ"**

ಈ ಅಷ್ಟತನುವಿನೊಳಗೆ ಪರಮಾತ್ಮ ಹುದುಗಿದ್ದಾನೆ. ಅಂದರೆ ಪರಮಾತ್ಮ ಮನುಷ್ಯ ಶರೀರದ ಹೊರತಾಗಿಲ್ಲ. ಈ ಸಿದ್ಧಾಂತ ಭಾರತೀಯ ಸನಾತನ ವಿಚಾರವಾದ ಹೊಲಸು ಶರೀರ, ಕೆಡಕಾಗುವ ಶರೀರ ಅದನ್ನು ತಪಸ್ಸಿನಿಂದ ಸುಡುವದೇ ನಿಜವಾದ ಸಾಧನೆ ಎಂಬ ವಿಚಾರವನ್ನು ಶರಣರು ಅಲ್ಲಗಳೆದು, ಈ ದೇಹವೇ ದೇಗುಲ, ದೇಹವೇ ಪರಮಾತ್ಮನ ವಾಸಸ್ಥಾನವೆಂದರು. ಇನ್ನು ಮೂರನೆ ಪ್ರಶ್ನೆ ಕಾಡುತ್ತದೆ. ಆ ಪರಮಾತ್ಮ ದೇಹದಲ್ಲಿ ಯಾವ ರೂಪದಲ್ಲಿದ್ದಾನೆ. ಮನುಷ್ಯನ ಅಂತರಂಗದ ಅರಿವಿನ ಆಳದಲ್ಲಿ ಶೂನ್ಯ ಸ್ವರೂಪಿ ಪರಮಾತ್ಮ ಲಿಂಗದ ಸ್ವರೂಪದಲ್ಲಿದ್ದಾನೆ. ಆ ಲಿಂಗ ಪ್ರತ್ಯಕ್ಷವಾದುದು ಬಸವಣ್ಣನವರು ತಮ್ಮ ವಚನದಲ್ಲಿ ವರ್ಣಿಸುತ್ತಾರೆ.

**"ಅಯ್ಯಾ, ಎನ್ನ ಹೃದಯದಲ್ಲಿ ವ್ಯಾಪ್ತವಾಗಿಹ**
**ಪರಮ ಚಿದ್ಬೆಳಗ ಹಸ್ತಮಸ್ತಕ ಸಂಯೋಗದಿಂದೊಂದು**
**ಗೂಡಿ ಮಹಾಬೆಳಗ ಮಾಡಿದಿರಲ್ಲಾ!**
**ಅಯ್ಯಾ, ಎನ್ನ ಮಸ್ತಕದೊಳಗೊಂದು**
**ಗೂಡಿದ ಮಹಾಬೆಳಗ ತಂದು ಭಾವದೊಳಗಿಂಬಿಟ್ಟಿರಲ್ಲಾ!**
**ಅಯ್ಯಾ, ಎನ್ನ ಭಾವದೊಳಗೆ ಕೂಡಿದ**
**ಮಹಾಬೆಳಗ ತಂದು ಮನಸಿನೊಳಗಿಂಬಿಟ್ಟಿರಲ್ಲಾ!**
**ಅಯ್ಯಾ, ಎನ್ನ ಮನಸ್ಸಿನೊಳು ಕೂಡಿದ**
**ಮಹಾಬೆಳಗ ತಂದು ಕಂಗಳೊಳಗಿಂಬಿಟ್ಟಿರಲ್ಲಾ!**
**ಅಯ್ಯಾ, ಎನ್ನ ಕಂಗಳೊಳು ಕೂಡಿದ**
**ಮಹಾಬೆಳಗ ತಂದು ಕರಸ್ಥಲದೊಳಗಿಂಬಿಟ್ಟಿರಲ್ಲಾ!**
**ಅಯ್ಯಾ, ಎನ್ನ ಕರಸ್ಥಲದಲ್ಲಿ ಥಳಥಳಿಸಿ ಬೆಳಗಿ ಹೊಳೆಯುತ್ತಿಪ್ಪ**
**ಅಖಂಡ ತೇಜವನೆ ಇಷ್ಟಲಿಂಗವೆಂಬ ದೃಷ್ಟವ ತೋರಿ**
**ನಿಶ್ಚಯವ ಶ್ರೋತ್ರದಲ್ಲಿ ಸೃಜಿಸಿದಿರಲ್ಲಾ!**
**ಅಯ್ಯಾ, ಎನ್ನ ಶ್ರೋತ್ರದಲ್ಲಿ ಸೃಜಿಸಿದ ಸುಮಂತ್ರದೊಳೊ**
**ನೀವು ನಿಮ್ಮ ಮಹತ್ವ ಹುದುಗಿದಿರಲ್ಲಾ!**
**ಅಯ್ಯಾ, ಎನ್ನ ಆರಾಧ್ಯ ಕೂಡಲಸಂಗಮದೇವಾ**
**ಎನ್ನೊಳಗೆ ನಿಮ್ಮಿರವ ಈ ಪರಿಯಲ್ಲಿ ಕಾಣಿಸುತ್ತಿರ್ದಿರಲ್ಲಾ"**

ಅಂದರೆ ಅಂತರಂಗದ ಲಿಂಗ ಕರಸ್ಥಲದ ಇಷ್ಟಲಿಂಗವಾಗಿ ಬಾಹ್ಯದಲ್ಲಿ ಅಭಿವ್ಯಕ್ತವಾಗಿದೆ. ಇಷ್ಟಲಿಂಗನನ್ನು ನಿಜವಾಗಿ ಕಂಡರೆ ಶೂನ್ಯ ರೂಪಿ ಪರಮಾತ್ಮನ ಸ್ವರೂಪವೇ ಆಗಿದ್ದಾನೆ. ಇದಕ್ಕೆ ಷಣ್ಮುಖ ಶಿವಯೋಗಿಗಳು ಕೂಡಾ ಕರಸ್ಥಲದಲ್ಲಿಯ ಪರಮ ನಿರಂಜನ ಸ್ವರೂಪಿ ಪರಮಾತ್ಮ ಎಂದಿದ್ದಾರೆ.

**"ಎನ್ನ ಕರಕಮಲ ಮಧ್ಯದಲ್ಲಿ**
**ಪರಮ ನಿರಂಜನದ ಕುರುಹ ತೋರಿದ**
**ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆಯ ತೋರಿದ**
**ಆ ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗ ತೋರಿದ**
**ಆ ಬೆಳಗಿನ ನಿಲವಿನೊಳಗೆ ಎನ್ನ ತೋರಿದ**
**ಎನ್ನೊಳಗೆ ತನ್ನ ತೋರಿದ ತನ್ನೊಳಗೆ ಎನ್ನ ನಿಂಬಿಟ್ಟುಕೊಂಡ**
**ಮಹಾಗುರುವಿಂಗೆ ನಮೋ ನಮೋ ಎನುತಿರ್ದೆನಯ್ಯಾ ಅಖಂಡೇಶ್ವರಾ."**

ನಮ್ಮೊಳಗೆ ಇದ್ದ ಘನವನ್ನ ನಾವೇ ಕಂಡುಕೊಳ್ಳಬೇಕು. ಅದು ಹೇಗೆ ಎಂಬ ಪ್ರಶ್ನೆ ಬರುತ್ತದೆ. ಶಿವಯೋಗಿ ಸಿದ್ಧರಾಮೇಶ್ವರರು ಹೇಳುತ್ತಾರೆ

**"ಎಲ್ಲರಿಗಿಂತ ಶಿವಭಕ್ತರಧಿಕರೆಂಬ ಕಾರಣವೇನಯ್ಯಾ
ನಿತ್ಯ ಲಿಂಗಾರ್ಚನೆ ಮೂರು ವೇಳೆ.
ಲಿಂಗಾರ್ಚನೆಗೊಮ್ಮೆ ಲಿಂಗತ್ರಯಪೂಜೆ ಕಪಿಲಸಿದ್ಧಮಲ್ಲಿಕಾರ್ಜುನಾ"**

ಅಂಗತ್ರಯಗಳಿಗೆ ಲಿಂಗತ್ರಯ ಪೂಜೆ, ಸ್ಥೂಲ ಶರೀರಕ್ಕೆ ಇಷ್ಟಲಿಂಗ, ಸೂಕ್ಷ್ಮ ಶರೀರಕ್ಕೆ ಪ್ರಾಣಲಿಂಗ, ಕಾರಣ ಶರೀರಕ್ಕೆ ಭಾವಲಿಂಗ ಪೂಜೆ ಇವು ಮೂರು ಕೂಡಿದಾಗ ಇಷ್ಟಲಿಂಗಯೋಗವಾಗುತ್ತದೆ. ಇದು ಒಂದು ಸಿಸ್ಟ್‌ಮ್ಯಾಟಿಕ್ ಪ್ರೋಸೆಸ್ ಇದೆ. ಸ್ಥೂಲ ಶರೀರವಿಲ್ಲದಿದ್ದರೆ ಪ್ರಾಣ ಶರೀರವಿಲ್ಲ. ಪ್ರಾಣ ಶರೀರವಿಲ್ಲದಿದ್ದರೆ ಭಾವನಿಕ ಶರೀರವಿರುವುದಿಲ್ಲ. ಹಾಗೆ ಇಷ್ಟಲಿಂಗವಿಲ್ಲದಿದ್ದರೆ ಪ್ರಾಣಲಿಂಗವಿಲ್ಲ, ಪ್ರಾಣಲಿಂಗವಿಲ್ಲದಿದ್ದರೆ ಭಾವಲಿಂಗವಿಲ್ಲ. ಆದ್ದರಿಂದ ಇಷ್ಟಲಿಂಗ ಧರಿಸಿಕೊಳ್ಳಲೇಬೇಕು.

ಇಷ್ಟಲಿಂಗಾರ್ಚನೆಯಲ್ಲಿ ಇಷ್ಟಲಿಂಗ ಎಡದ ಕೈಯಲ್ಲಿಟ್ಟು ನಿರೀಕ್ಷಣೆ ಮಾಡಬೇಕು ಯಾವ ರೀತಿ ನೋಡಬೇಕೆಂದರೆ

**'ಅಂಗೈಯ ಲಿಂಗದಲ್ಲಿ ಕಂಗಳನಟ್ಟು ಎವೆ
ಹಳಚದೆ ಮನಕನಲಿಡದೆ ಚಿತ್ರದ ರೂಹಿನ
ತೆರದಂತೆ ಲಿಂಗವ ನೋಡಿ ಕಂಗಳಲ್ಲಿಚೊತ್ತಿ"**
ಎನ್ನುತ್ತಾರೆ ತೋಂಟದ ಸಿದ್ಧಲಿಂಗಯತಿಗಳು.

ಅಕ್ಕಮಹಾದೇವಿ ತಾಯಿಯವರು "ಅಷ್ಟದಳ ಕಮಲದ ಬಟ್ಟಬಯಲೊಳಗೊಂದು ಮುಟ್ಟಬಾರದ ಘನವಿಹುದು। ಅದರೊಳಗೆ ದೃಷ್ಟಿ ಇಟ್ಟವನೆ ನಿಜಮುಕ್ತ" ಎನ್ನುತ್ತಾರೆ. ಕಾಣುವ ಭೌತಿಕ ಜಗತ್ತು ಐದು ಪ್ರತಿಶತವಿದ್ದರೆ ಕಾಣದೆ ಇರುವ ಅಭೌತಿಕ ಜಗತ್ತು ೯೫% ವಿದೆಯಂತೆ. ಅದು ಕಪ್ಪು ಬಣ್ಣದಲ್ಲಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಅದಕ್ಕೆ ಬಸವಣ್ಣನವರು ಈ ಸತ್ಯವನ್ನರಿದು ಇಷ್ಟಲಿಂಗದ ಪರಿಕಲ್ಪನೆಯಲ್ಲಿ ಕಪ್ಪು ಬಣ್ಣವನ್ನು ಕಂಡು ಅದರಲ್ಲಿರಿಸಿದ್ದಾರೆ.

ಆ ಲಿಂಗ, ಅನಿಮಿಷ ದೃಷ್ಟಿಯಿಂದ ನೋಡುತ್ತಾ ಹೋದರೆ ಬಾಹ್ಯ ಇಂದ್ರಿಯಗಳು ಅಂತರಮುಖವಾಗಿ ಮನುಷ್ಯ ತನ್ನ ಬುದ್ಧಿ ಅಹಂಕಾರ ಮನಸ್ಸು ದಾಟಿ ಚಿತ್ತದ ಆ ಕಡೆಯ ಶೂನ್ಯ ಮಹಾಘನ ಲಿಂಗ ಸ್ವರೂಪದ ಪರಮಾತ್ಮನಲ್ಲಿ ಸಾಮರಸ್ಯ ಹೊಂದುತ್ತಾನೆ.

**ಪ್ರಾಣಲಿಂಗಾರ್ಚನೆ:** ಇಷ್ಟಲಿಂಗಾರ್ಚನೆಯಲ್ಲಿ ಅನಿಮಿಷ ದೃಷ್ಟಿಯಿಂದ ಲಿಂಗ ನೋಡಿದರೆ ಪ್ರಾಣ ಲಿಂಗಾರ್ಚನೆಯಲ್ಲಿ ಕಣ್ಣುಮುಚ್ಚಿ ಅಂತರಂಗದಲ್ಲಿಯ ನವಚಕ್ರಗಳಲ್ಲಿ ಸ್ಥಿತವಾಗಿದ್ದ ನವಲಿಂಗಗಳನ್ನು ಉದ್ದೀಪನಗೊಳಿಸಿ ಅವುಗಳ ಮುಖಾಂತರ ಮನುಷ್ಯನ ಅರಿವನ್ನು ಬ್ರಹ್ಮಾಂಡದ ಅರಿವಿನ ಜೊತೆ ಕೂಡಿಸುವ ಪ್ರಕ್ರಿಯೆಯಿದೆ. ನವಚಕ್ರಗಳಲ್ಲಿ ಧ್ಯಾನ ಒಗ್ಗೂಡಿಸಿ ನವಾಕ್ಷರಮಂತ್ರ 'ಬಸವ ಓಂ ನಮಃ ಶಿವಾಯ' ಬೀಜಾಕ್ಷರಗಳು ಜಪಿಸುವ ಕ್ರಿಯೆಯಿದೆ.

೧. **ಮೊದಲನೆಯದು ಆಧಾರ ಚಕ್ರ:** ಜೀವನದ ಆಧಾರವೇ ಮೂಲಾಧಾರವಾಗಿದೆ. ಇದು ಗುದಭಾಗದಲ್ಲಿರುತ್ತದೆ. ಈ ಚಕ್ರ ಜಾಗ್ರತವಾದರೆ ಆಲಸ್ಯತನ ಹೋಗಿ ಚೈತನ್ಯ ಪುಟಿದೇಳುತ್ತದೆ. ಇಲ್ಲಿ 'ಬ'ಕಾರ ಉಚ್ಚಾರ ಮಾಡಬೇಕು. ಇದಕ್ಕೆ ಆಚಾರಲಿಂಗವೆಂದು ಕರೆಯುತ್ತಾರೆ.

೨. **ಎರಡನೆಯದು ಸ್ವಾಧಿಷ್ಠಾನ ಚಕ್ರ:** ಇದು ಆಧಾರ ಚಕ್ರದ ಸ್ವಲ್ಪ ಮೇಲ್ಭಾಗದಲ್ಲಿರುತ್ತದೆ. ಅಂದರೆ ಗುಹ್ಯಭಾಗದಲ್ಲಿ ಸ್ವಾಧಿಷ್ಠಾನ ಚಕ್ರವಿದೆ. ಇದು ಎಲ್ಲ ಲಿಂಗಗಳಿಗೆ ಶಕ್ತಿ ಕೊಡುತ್ತದೆ. ಇಡಾ-ಪಿಂಗಳ ನಾಡಿನೂ ಇದರಿಂದ ಜಾಗ್ರವಾಗುತ್ತದೆ. ಇಲ್ಲಿ ಬಹಳಷ್ಟು ಗುಣಗಳಿವೆ. ಅದಕ್ಕೆಗುರುವಿನ ಸ್ಥಾನ ಕೊಟ್ಟಿದ್ದಾರೆ. ಇಲ್ಲಿ 'ಸ'ಕಾರ ಉಚ್ಚಾರ ಮಾಡಬೇಕು. ಇದಕ್ಕೆ ಗುರುಲಿಂಗವೆಂದು ಕರೆಯುತ್ತಾರೆ.

೩. **ಮಣಿಪೂರಕ ಚಕ್ರ:** ಇದು ಹೊಕ್ಕಳ ಭಾಗದಲ್ಲಿರುತ್ತದೆ. ಭಯ, ಸಂಶಯವಿದ್ದ ವ್ಯಕ್ತಿ ಈ ಚಕ್ರ ಜಾಗೃತ ಮಾಡಿಕೊಂಡರೆ ಸಂಶಯರಹಿತನಾಗುತ್ತಾನೆ. ನಿರ್ಭಯನಾಗುತ್ತಾನೆ. ಇಲ್ಲಿ 'ವ'ಕಾರ ಉಚ್ಚಾರ ಮಾಡಬೇಕು. ಇದಕ್ಕೆ ಶಿವಲಿಂಗವೆಂದು ಕರೆಯುತ್ತಾರೆ.

೪. **ಅನಾಹತ ಚಕ್ರ:** ಇದು ಹೃದಯಭಾಗದಲ್ಲಿರುತ್ತದೆ. ಈ ಭಾಗ ಜಾಗೃತವಾದರೆ ಮನೋಬಲ ಸಂಕಲ್ಪಶಕ್ತಿ ಹೆಚ್ಚಾಗುತ್ತದೆ. ಇಲ್ಲಿ 'ಓಂ' 'ಓಂ' ಉಚ್ಚಾರ ಮಾಡಬೇಕು. ಇದಕ್ಕೆ ಜಂಗಮ ಲಿಂಗವೆಂದು ಕರೆಯುತ್ತಾರೆ.

೫. **ವಿಶುದ್ಧಿ ಚಕ್ರ:** ಇದು ಕಂಠದ ಸ್ಥಾನದಲ್ಲಿರುತ್ತದೆ. ಈ ಭಾಗ ಜಾಗೃತವಾದರೆ ವಾಣಿಸಿದ್ಧಿಯಾಗುತ್ತದೆ. ವಾಣಿಯಲ್ಲಿ ಮಧುರತೆ ಬರುತ್ತದೆ. ಇಲ್ಲಿ 'ನಂ' ಕಾರ ಉಚ್ಚಾರ ಮಾಡಬೇಕು. ಇದಕ್ಕೆ ಪ್ರಸಾದ ಲಿಂಗವೆಂದು ಕರೆಯುತ್ತಾರೆ.

೬. **ಆಜ್ಞಾ ಚಕ್ರ:** ಇದು ಮೆದುಳಿನ ಮುಂಭಾಗ ಭೃಕುಟಿಯ ಹಿಂದೆ ಇರುತ್ತದೆ. ಈ ಭಾಗ ಜಾಗೃತವಾದರೆ ಮಹಾಜ್ಞಾನದ ನಿಧಿಯೇ ಅವನ ಕೈವಶವಾಗುತ್ತದೆ. ಇಲ್ಲಿ 'ಹಂ'ಕಾರ ಉಚ್ಚಾರಮಾಡಬೇಕು. ಇದಕ್ಕೆ ಮಹಾಲಿಂಗವೆಂದು ಕರೆಯುತ್ತಾರೆ.

ಈ ಆರು ಚಕ್ರಗಳು ಜಾಗ್ರತವಾದರೆ ಮುಂದಿನ ಮೂರು ಚಕ್ರಗಳು ತನ್ನಿಂದ ತಾನೆ ಜಾಗೃತವಾಗುತ್ತಾ ಹೋಗುತ್ತವೆ.

೭. **ಬ್ರಹ್ಮ ಚಕ್ರ:** ಇದು ಮೆದುಳಿನ ಮಧ್ಯ ತಾಳಗೆಯ ಕೆಳಗಡೆ ಇರುತ್ತದೆ. ಇಲ್ಲಿ 'ಶಿ'ಕಾರ ಉಚ್ಚಾರವಾಗುತ್ತದೆ. ಇದಕ್ಕೆ ನಿಷ್ಕಲ ಲಿಂಗವೆನ್ನುತ್ತಾರೆ.

೮. **ಶಿಖಾ ಚಕ್ರ:** ಇದು ಮೆದುಳಿನ ಮಧ್ಯಭಾಗದಲ್ಲಿ ಕಿವಿಗಳ ಸಮತಲದಲ್ಲಿ ಇರುತ್ತದೆ. ಇಲ್ಲಿ 'ವಾ' ಕಾರ ಉಚ್ಚಾರವಾಗುತ್ತದೆ. ಇದಕ್ಕೆ ಶೂನ್ಯ ಲಿಂಗವೆನ್ನುತ್ತಾರೆ.

೯. **ಪಶ್ಚಿಮ ಚಕ್ರ:** ಇದು ಎಡಕಿವಿಯ ಕೆಳಭಾಗದ ಸಮತಲದಲ್ಲಿರುತ್ತದೆ. ಇಲ್ಲಿ 'ಯ'ಕಾರ ಉಚ್ಚಾರವಾಗುತ್ತದೆ, ಇದಕ್ಕೆ ನಿರಂಜನ ಲಿಂಗವೆನ್ನುತ್ತಾರೆ.

ಪ್ರಾಣಲಿಂಗಾರ್ಚನೆಯಲ್ಲಿ ಬ್ರಹ್ಮಾಂಡದ ಅರಿವು ನಮ್ಮರಿವಿಗೆ ಜೋಡಿಸುವ ಕಿಟಕಿಗಳೇ ಈ ನವಚಕ್ರಗಳು. ನವಲಿಂಗ ಸಾಧನೆಯಿಂದ ನವಚಕ್ರಗಳು ಸುಪ್ತಾವಸ್ಥೆಯಿಂದ ಎದ್ದು ಜಾಗೃತವಾಗಿ ಬ್ರಹ್ಮಾಂಡ ವ್ಯಾಪ್ತವಾದ ಅರಿವಿಗೆ ನಮ್ಮರಿವಿನ ದ್ವಾರ ತೆರೆಯುತ್ತವೆ. ವಾಯುಪ್ರಾಣಿಯೆಂದೆನಿಸದೆ ಲಿಂಗಪ್ರಾಣಿಯೆಂದೆನಿಸಿದನಯ್ಯಾ ಬಸವಣ್ಣನು ಎನ್ನುತ್ತಾರೆ ಚೆನ್ನಬಸವಣ್ಣನವರು. ಅಂದರೆ ೩.೨.೨ ಲಕ್ಷಕೋಟಿ

ಕೋಶಗಳಲ್ಲಿ ವಾಯುಪ್ರಾಣವಿದೆ. ಅಲ್ಲಿ ಮನಸ್ಸು ಕೇಂದ್ರಿಕರಣಗೊಳಿಸುತ್ತಾ ಲಿಂಗ ಸ್ವರೂಪಿ ಆಗಬೇಕು. ಆವಾಗ ಅಂತರ ಬಾಹ್ಯ ಒಂದೇ ಆಗಿ ಸಾಮರಸ್ಯ ಹೊಂದುತ್ತದೆ.

ಮನಸ್ಸಿನ ಶಕ್ತಿ ಇಷ್ಟು ಅದ್ಭುತವಿದೆಯೆಂದರೆ ಮನುಷ್ಯನ ದೈಹಿಕ ಸಾಮರ್ಥ್ಯ, ಬೌದ್ಧಿಕ ಸಾಮರ್ಥ್ಯ ಭಿನ್ನ ಭಿನ್ನವಾಗಿರಬಹುದು. ಆದರೆ ಮನಸ್ಸಿನ ಸಾಮರ್ಥ್ಯ ಎಲ್ಲರಲ್ಲಿ ಒಂದೇ ಆಗಿರುತ್ತದೆ. ಒಂದು ಮನಸ್ಸಿಗೆ ಸಾಧ್ಯವಾದರೆ ಇನ್ನೊಂದು ಮನಸ್ಸಿಗೂ ಸಾಧ್ಯವಾಗುತ್ತದೆ, ಪ್ರಯತ್ನ ಮಾಡಬೇಕು.

**ಖಖಖ.ಭಾವಲಿಂಗಾರ್ಚನೆ:** ಪ್ರಾಣಲಿಂಗಾರ್ಚನೆಯಲ್ಲಿ ಕಣ್ಣುಮುಚ್ಚಿ ಅಂತರಮುಖಿಯಾದರೆ ಭಾವಲಿಂಗಾರ್ಚನೆಯಲ್ಲಿ ಎಡಗೈ ಅಂದರೆ ಲಿಂಗಹಿಡಿದ ಕೈ ಮೇಲಕ್ಕೆ ಎತ್ತಿ ಇಷ್ಟಲಿಂಗ ಭ್ರೂಮಧ್ಯದ ಪಾತಳಿಗೆ ಎತ್ತಿ ಹಿಡಿದು ಅರ್ಧ ಕಣ್ಣು ತೆರೆದು ಅಂದರೆ ಅನಿಮಿಷ ದೃಷ್ಟಿಯಿಂದ ಲಿಂಗ ನೋಡಬೇಕು. ಇಲ್ಲಿ ಬ್ರಹ್ಮಾಂಡ ವ್ಯಾಪ್ತ ಪ್ರಜ್ಞೆ ಮನುಷ್ಯನ ಅಂತರಂಗದಲ್ಲಿಯ ಆಳವಾದ ಪ್ರಜ್ಞೆ ಒಂದೇ ಆಗುತ್ತದೆ. ಈ ಸ್ಥಿತಿಗೆ ಅಕ್ಕಮಹಾದೇವಿ ಹೇಳುತ್ತಾಳೆ.

**"ಲಿಂಗವೆನ್ನೆ ಲಿಂಗೈಕ್ಯವೆನ್ನೆ, ಸಂಗವೆನ್ನೆ ಸಮರಸವೆನ್ನೆ**
**ಆಯಿತೆನ್ನ ಆಗದೆನ್ನೆ, ನೀನೆನ್ನೆ ನಾನೆನ್ನೆ**
**ಚೆನ್ನಮಲ್ಲಿಕಾರ್ಜುನಯ್ಯಾ, ಲಿಂಗೈಕ್ಯವಾದ ಬಳಿಕ ಏನೂ ಎನ್ನೆ"**

ಲಿಂಗಾಂಗಸಂಗಸಮರಸ ಸುಖದಲ್ಲಿ ಮನವೇಧ್ಯವಾಯಿತು ಎನ್ನುತ್ತಾಳೆ. ಭಾವಲಿಂಗಾರ್ಚನೆಯಲ್ಲಿ ಅಂಗ-ಲಿಂಗ ಒಂದೇ ಆಗುತ್ತವೆ.

ಇದು ಅದ್ಭುತ ದರ್ಶನ. ಈ ದರ್ಶನ ಕಂಡೆ ಕೆಲವು ಶರಣರು ಅದರಲ್ಲಿಯೇ ಒಂದಾಗಿರುತ್ತಾರೆ. ಕೆಲವು ಶರಣರು ಆ ಅನುಭವ ವಚನದಲ್ಲಿ ಹಿಡಿದಿಟ್ಟಿದ್ದಾರೆ. **ಅರೂಪದಲ್ಲಿ ಇದ್ದಂಥ ಸತ್ಯವನ್ನು ಸ್ವರೂಪದಲ್ಲಿ ತಂದುದೇ ಇಷ್ಟಲಿಂಗವಿದೆ. ಈ ಸ್ವರೂಪದಲ್ಲಿ ತಂದ ಸತ್ಯ ಅರೂಪದಲ್ಲಿ ಪ್ರಸ್ತಾಪ ಮಾಡಿದ್ದಾರೆ.** ಅದೇ ವಚನ ಸಾಹಿತ್ಯವಿದೆ. ಇಷ್ಟಲಿಂಗವೆಂದರೆ ಸಾಮಾನ್ಯವಲ್ಲರಿ-

**"ಷಟ್ತ್ರಿಂಶ ತತ್ತ್ವಕ್ಕೆ ಆಲಯ ಮಪ್ಪಂತಾ**
**ಮಹಾಘನಲಿಂಗದ ಬೆಳಗು ಕರಸ್ಥಲದಲ್ಲಿ**
**ಮನಸ್ಥಲದಲ್ಲಿ ಭಾವಸ್ಥಲದಲ್ಲಿ ವೇದ್ಯವಾದ**
**ಬಳಿಕ ಸರ್ವಾಂಗಲಿಂಗ ಕೂಡಲಸಂಗಯ್ಯ**
**ನಿಮ್ಮ ಶರಣಂಗೆ"** ಎನ್ನುತ್ತಾರೆ ಬಸವಣ್ಣನವರು.

ಕೊನೆಯದಾಗಿ ಇಲ್ಲಿಯ ವರೆಗೆ ಇಷ್ಟಲಿಂಗದ ಅಧ್ಯಾತ್ಮಿಕ ಸ್ವರೂಪ ತಿಳಿಸಲಾಗಿದೆ. ಇನ್ನು ಇಷ್ಟಲಿಂಗದ ವೈಜ್ಞಾನಿಕ ಸ್ವರೂಪ, ಸಾಮಾಜಿಕ ಸ್ವರೂಪ, ಈಗೀಗ ರಾಜಕೀಯ ಸ್ವರೂಪಾನು ಪಡೆದುಕೊಳ್ಳುತ್ತಿದೆ. ಮುಂದೆ ಯಾವಾಗಲಾದರೂ ಅವಕಾಶ ಸಿಕ್ಕರೆ ಅದನ್ನು ವಿವರವಾಗಿ ತಿಳಿಸುತ್ತೇನೆ.

**ಆಕರ ಗ್ರಂಥಗಳು**

೧) ಜ್ಞಾನ ಗಂಗೋತ್ರಿ ಕಿರಿಯರ ವಿಶ್ವಕೋಶ (ಕಲೆ, ಸಾಹಿತ್ಯ-೫)
೨) ಕನ್ನಡ ವಿಶ್ವಕೋಶ ಸಂಪುಟಗಳು-೧ ರಿಂದ ೧೪
೩) ಮಹಾಮನೆ ಸಂ – ೨೮
೪) ಬಸವಪಥ ಸಂ -೪೩
೫) ವಚನ ಸಂಜೀವಿನಿ - ಡಾ. ಬಸವಲಿಂಗ ಪಟ್ಟದ್ದೇವರು
೬) ಕಾಯಕ ದಾಸೋಹ – ಡಾ. ಬಸವರಾಜ ಸಬರದ